**ಪ್ರಮಾಣೀಕರಿಸಿದ ದಿನಾಂಕಃ 23.06.2025**

**PW**-1

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಟಿ.ಕೆ.ಡಿ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸುತ್ತಿದ್ದು, ಸದರಿ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿದ್ದು, ನಾನೇ ಖುದ್ದು ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿನ ಸಹಿ ಕೂಡಾ ನನ್ನದೆ.

**(ಮುಂದುವರೆದ ಮುಖ್ಯವಿಚಾರಣೆಯನ್ನು ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

**ಪ್ರಮಾಣೀಕರಿಸಿದ ದಿನಾಂಕಃ**

**ಪ್ರಮಾಣೀಕರಿಸಿದ ದಿನಾಂಕಃ 17-01-2025**

**RW-1**

**<u>ಪಾಟೀ ಸವಾಲು, ಅರ್ಜಿದಾರರ ಪರ ಶ್ರೀ.ಟಿ.ಕೆ.ಡಿ ವಕೀಲರಿಂದಃ</u>**

ನಾನು ಎಸ್‌ಎಸ್‌ಎಲ್‌ಸಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಅರ್ಜಿ ಯಾಕೆ ಹಾಕಿದ್ದಾರೆಂದು ತಿಳಿದುಕೊಂಡಿದ್ದೇನೆ. ಅರ್ಜಿದಾರರು ಮತ್ತು ನಾವು ಅಣ್ಣ ತಮ್ಮದಿರು. ಸಿವಿಲ್ ಮಿಸ್ 10006/2020 ಪ್ರಕರಣದಲಿಲ ನನ್ನ ಅಣ್ಣ ತಮ್ಮದಿರನ್ನು ಪಕ್ಷಕಾರರಾಗಿ ಸೇರಿಸಿಲ್ಲ ಎಂದರೆ ಸರಿ. ವಿಲ್ ಶೆಡ್ಯೂಲ್ ಸ್ವತ್ತು ಪಿತ್ರಾರ್ಜಿತ ಎಂದರೆ ನನಗೆ ಗೊತ್ತಿಲ್ಲ. ವಿಲ್ ನಲ್ಲಿ ಪಿತ್ರಾರ್ಜಿತ ಎಂದು ನಮೂದಿಸಿದೆ. ವಿಲ್ ನನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸತ್ಯಾಸತ್ಯತೆಯನ್ನು ಮರೆ ಮಾಚಿ ನಾನು ಪ್ರೊಬೇಟ್ ನ್ನು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ರೆವಿನ್ಯೂ ಇಲಾಖೆಗೆ ಖಾತೆ ಮಾಡಿಸಲು ಅರ್ಜಿ ಸಲ್ಲಿಸಿದಾಗ ನಾನು ಪ್ರೊಬೇಟ್ ತೆಗೆದುಕೊಂಡಿರುವ ವಿಚಾರ ಅರ್ಜಿದಾರರಿಗೆ ಗೊತ್ತಾಗಿದೆ ಎಂದರೆ ಸರಿಯಲ್ಲ.

(**ಮರುವಿಚಾರಣೆ ಇಲ್ಲವೆಂದಿದ್ದಾರೆ**).

(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು**).

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

**ಪ್ರಮಾಣೀಕರಿಸಿದ ದಿನಾಂಕಃ 27-01-2024**

**<u>ಪಾಟೀಸವಾಲು, ಎದುರುದಾರರ ಪರ ಶ್ರೀ.ಬಿ.ಡಿ.ಜೆ. ವಕೀಲರಿಂದಃ</u>**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಭೂಬಳಕೆಯಾದಂತಹ ಜಮೀನು ನನ್ನ ಹಕ್ಕು ಮತ್ತು ಅನುಭವದಲ್ಲಿ ಇದೆ ಎಂದರೆ ಸರಿ. ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ಮಾರುಕಟ್ಟೆ ಬೆಲೆಯನ್ನು ನಾನು

ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಅಪೀಲು ಸಲ್ಲಿಸಿ ಪ್ರಶ್ನೆ ಮಾಡಿಲ್ಲ. ಸಕ್ಷಮ ಪ್ರಾಧಿಕಾರದವರು ಮಾಡಿದ ಐತೀರ್ಪಿನ ಅಂಶಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ಜಿಲ್ಲಾಧಿಕಾರಿಗಳು ಭೂಬಳಕೆಯ ಜಮೀನಿಗೆ ಕೊಟ್ಟಂತಹ ಪರಿಹಾರ ಸರಿಯಾಗಿದೆ ಎಂದರೆ ಸರಿಯಲ್ಲ. ಭೂಬಳಕೆ ಮಾಡಿಕೊಳ್ಳುವ ಮೊದಲು ಎಲ್ಲಾ ಭೂಮಾಲೀಕರಿಗೆ ನೊಟೀಸ್ ಕೊಟ್ಟಿದ್ದರು ಎಂದರೆ ಸರಿ. ಮೌಲ್ಯ ನಿಗದಿಪಡಿಸುವ ಮೊದಲು ಜಿಲ್ಲಾಧಿಕಾರಿಗಳು ರೈತರ ಅವರ ಅಹವಾಲುಗಳನ್ನು ಸಲ್ಲಿಸುವ ಅವಕಾಶಗಳನ್ನು ಕೊಟ್ಟಿದ್ದು, ರೈತರು ಅಹವಾಲುಗಳನ್ನು ಸಲ್ಲಿಸಿದ ನಂತರ ಆ ಎಲ್ಲಾ ಅಹವಾಲುಗಳನ್ನು ಗಣನೆಗೆ ತೆಗೆದುಕೊಂಡಿದ್ದರು ಎಂದರೆ ಸರಿ.

ನಮ್ಮ ಜಮೀನಿನ ಬೆಲೆ ಗುಂಟೆಗೆ ಒಂದು ಲಕ್ಷ. ಜಿಲ್ಲಾಧಿಕಾರಿಗಳು 5 ಸಾವಿರ ಕೊಟ್ಟಿದ್ದಾರೆ. ನಮ್ಮ ಊರಿನ ಜಮೀನುಗಳ ಬೆಲೆ ಗುಂಟೆಗೆ ಒಂದು ಲಕ್ಷ ಎಂದು ತೋರಿಸಲು ನಾನು ದಾಖಲೆ ಕೊಟ್ಟಿದ್ದೇನೆ. ನಿ.ಪಿ-15 ಮತ್ತು 16 ಕ್ರಯಪತ್ರಗಳಿಗೂ ಈ ಪ್ರಕರಣದ ಜಮೀನುಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಭೂಮಾಲೀಕರಿಗೆ ನೊಟೀಸ್ ಕೊಟ್ಟ ನಂತರ ನಿ.ಪಿ-15 ಮತ್ತು 16 ಕ್ರಯಪತ್ರಗಳನ್ನು ಅನುಕೂಲಕ್ಕೆ ತಕ್ಕಂತೆ ಜಮೀನಿನನ ಬೆಲೆಯನ್ನು ಹೆಚ್ಚಿಗೆ ತೋರಿಸಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಕ್ರಯಪತ್ರಗಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೂ ಮತ್ತು ನಮ್ಮ ಊರಿಗೂ ಎರಡೂವರೆ ಕಿ.ಮೀ ದೂರ. ಎದುರುದಾರರು ಕಾಯಿದೆ ಪ್ರಕಾರ ನಮಗೆ ಸರಿಯಾದ ಪರಿಹಾರವನ್ನೇ

ನೀಡಿದ್ದಾರೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಪೈಪ್ ಲೈನನ್ನು 10 ಅಡಿ ಆಳದಲ್ಲಿ ಹಾಕಿದ್ದಾರೆ ಎಂದರೆ ಸರಿ. ಗ್ಯಾಸ್ ಪೈಪ್ ಲೈನ್ ಹಾಕಿದ ಜಾಗದಲ್ಲಿ ಮಣ್ಣನ್ನು ಮುಚ್ಚಿದ್ದಾರೆ ಎಂದರೆ ಸರಿ. ಅಲ್ಲಿ ಬೆಳೆಯನ್ನು ಬೆಳಯಬಹುದು ಎಂದರೆ ಸರಿಯಲ್ಲ. ನನಗೆ ಭೂಬಳಕೆಯಾದ ಸರ್ವೇ ನಂಬರ್ ನಲ್ಲಿ ಒಟ್ಟು ವಿಸ್ತೀರ್ಣ 50 ಗುಂಟೆ ಇದೆ. ಭೂಬಳಕೆಯಾದ 50 ಗುಂಟೆ ಜಮೀನನ್ನು ಹೊರತುಪಡಿಸಿ ಬೇರೆ ಕಡೆ ಬೋರ್ ಹಾಕಿಸಲು ಅವಕಾಶ ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ಮರುವಿಚಾರಣೆ ಇಲ್ಲವೆಂದಿದ್ದಾರೆ**).

(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು**).

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**